**ದಿನಾಂಕ:23.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

9. ನಾನು ಅರ್ಜಿ ಜೊತೆ ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳನ್ನು ಪುನಃ ನೋಡಿದರೆ ಗುರುತಿಸಬಲ್ಲೆ. ಈಗ ನನಗೆ ದಾವಣಗೆರೆಯ ಚಿಗಟೇರಿ ಆಸ್ಪತ್ರೆಯವರು ನೀಡಿರುವ ದಿನಾಂಕಃ20.02.2025 ರ out patient record ನ್ನು ತೋರಿಸುತ್ತಿದ್ದು, ಅದನ್ನು ನಿಪಿ–5 ಎಂದು, ಅದೇ ರೀತಿ ಸದರಿ ಆಸ್ಪತ್ರೆಯವರು ನೀಡಿರುವ ದಿನಾಂಕಃ27.02.2025 ರ out patient record ನ್ನು ತೋರಿಸುತ್ತಿದ್ದು, ಅದನ್ನು ನಿಪಿ–6 ಎಂದು, ಚಿಗಟೇರಿ ಆಸ್ಪತ್ರೆಯವರು ನೀಡಿರುವ ದಿನಾಂಕಃ20.03.2025 ರ NCCT PNS ವರದಿಯನ್ನು ತೋರಿಸುತ್ತಿದ್ದು, ಅದನ್ನು ನಿಪಿ–7 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ರಿಂದ 7 ನೇ ಆರೋಪಿತರ ಪರವಾಗಿ ಶ್ರೀ ಪಿ.ಸಿ.ಬಿ. ವಕೀಲರಿಂದಃ**

10. ನಾನು ಮತ್ತು 1 ನೇ ಆರೋಪಿ ಒಂದೇ ಶಾಲೆಯ ಸಹಪಾಠಿಗಳು ಎಂದರೆ ಸರಿಯಲ್ಲ. ನಾನು 7 ನೇ ತರಗತಿ ಓದುವಾಗಿನಿಂದ 1 ನೇ ಆರೋಪಿ ನನಗೆ ಪರಿಚಯ ಇದ್ದರು ಎಂದರೆ ಸಾಕ್ಷಿಯು ಗೊತ್ತಿದ್ದರು ಎಂದು ನುಡಿದಿರುತ್ತಾರೆ. ನಾನು ಮತ್ತು 1 ನೇ ಆರೋಪಿ 7 ನೇ ತರಗತಿ ಓದುವಾಗಿನಿಂದಾಗಲೇ ಪರಸ್ಪರ ಪ್ರೀತಿಸುತ್ತಿದ್ದೆವು ಎಂದರೆ ಸರಿಯಲ್ಲ. ನನ್ನ ಮತ್ತು 1 ನೇ ಆರೋಪಿಯು ನೋಂದಣಿ ವಿವಾಹವಾಗುವುದಕ್ಕಿಂತ 5–6 ವರ್ಷಗಳಿಂದ ನಾವಿಬ್ಬರೂ ಪರಸ್ಪರ ಪ್ರೀತಿಸುತ್ತಿದ್ದೆವು ಎಂದರೆ ಸಾಕ್ಷಿಯು 4 ವರ್ಷಗಳಿಂದ ಪ್ರೀತಿಸುತ್ತಿದ್ದೆವು ಎಂದು ನುಡಿದಿರುತ್ತಾರೆ.

11. ನಾನು ಮತ್ತು 1 ನೇ ಆರೋಪಿ ಆ ರೀತಿ 4 ವರ್ಷಗಳಿಂದ ಪರಸ್ಪರ ಪ್ರೀತಿಸುತ್ತಿದ್ದ ಕಾರಣ ನಾವಿಬ್ಬರೂ ನಮ್ಮ–ನಮ್ಮ ತಂದೆ, ತಾಯಿ ಮತ್ತು ಮನೆಯವರಿಗೆ ತಿಳಿಸದೇ ನೇರವಾಗಿ ಹಿರೇಕೆರೂರು ತಾಲೂಕಿನ ಉಪ ನೋಂದಣಾಧಿಕಾರಿಗಳ ಕಚೇರಿಗೆ ಹೋಗಿ ನೋಂದಣಿ ಮದುವೆ ಮಾಡಿಕೊಂಡೆವು ಎಂದರೆ ನಿಜ. ನನ್ನ ಮತ್ತು 1 ನೇ ಆರೋಪಿಯ ಮದುವೆಯು ನೋಂದಣಿಯಾದ ವಿಚಾರ ನಮ್ಮ ಮನೆಯವರಿಗೆ 5–6 ತಿಂಗಳಾದ ನಂತರ ಗೊತ್ತಾಯಿತು. ಆದರೆ 1 ನೇ ಆರೋಪಿಯ ಮನೆಯವರಿಗೆ ಮದುವೆಯಾದ ದಿನವೇ ಸದರಿ ವಿಚಾರ ಗೊತ್ತಾಯಿತು.

12. ನನ್ನ ಮತ್ತು 1 ನೇ ಆರೋಪಿಯ ನೋಂದಣಿ ಮದುವೆಗೆ 1 ನೇ ಆರೋಪಿಯ ದೊಡ್ಡಮ್ಮನ ಮಗ ಬಂದಿದ್ದರು. ಆದರೆ 1 ನೇ ಆರೋಪಿಯ ದೊಡ್ಡಮ್ಮನ ಮಗನ ಹೆಸರು ಗೊತ್ತಿಲ್ಲ. ಆದರೆ ಆತನು ಕೋಟಿಹಾಳ ಗ್ರಾಮದ ನಿವಾಸಿ. ನಾನು 1 ನೇ ಆರೋಪಿ ಜೊತೆ ನೋಂದಣಿ ಮದುವೆ ಮಾಡಿಕೊಳ್ಳಲು ನಮ್ಮ ತಂದೆ, ತಾಯಿಯ ಅನುಮತಿಯನ್ನು ಪಡೆದುಕೊಂಡಿಲ್ಲ. ನಾನು 1 ನೇ ಆರೋಪಿ ಜೊತೆ ನೋಂದಣಿ ಮದುವೆ ಮಾಡಿಕೊಳ್ಳುವ ಕಾಲಕ್ಕೆ ಆತನಿಗೆ ತಂದೆ, ತಾಯಿ ಇಬ್ಬರೂ ಸಹ ಇರಲಿಲ್ಲ ಎಂದರೆ ನಿಜ.

13. 2 ರಿಂದ 7 ನೇ ಆರೋಪಿಗಳು 1 ನೇ ಆರೋಪಿಯ ದೂರದ ಸಂಬಂಧಿಗಳು ಎಂದರೆ ನಿಜ. ನಾನು ಮತ್ತು 1 ನೇ ಆರೋಪಿ ಸೇರಿ ಪ್ರೀತಿಸಿ ನೋಂದಣಿ ಮದುವೆ ಮಾಡಿಕೊಳ್ಳುವ ಕಾಲಕ್ಕೆ ನಮ್ಮಿಬ್ಬರಿಗೂ ನಾವು ಬೇರೆ-ಬೇರೆ ಜಾತಿಯವರೆಂದು ಗೊತಿತ್ತು ಎಂದರೆ ನಿಜ. ನಾನು 1 ನೇ ಆರೋಪಿಯನ್ನು ಪ್ರೀತಿ ಮಾಡಿರುವುದು ನಮ್ಮ ತಂದೆ, ತಾಯಿಗೆ ಮತ್ತು ನಮ್ಮ ಮನೆಯವರಿಗೆ ಇಷ್ಟವಿರಲಿಲ್ಲ ಎಂದರೆ ನಿಜ. ನಮ್ಮ ತಂದೆ, ತಾಯಿ ಮತ್ತು ನಮ್ಮ ಮನೆಯವರು ನನ್ನನ್ನು ಬೇಟೆಯವರಿಗೆ ಗೊತ್ತು ಮದುವೆ ಮಾಡಿಕೊಡಲು ಇಚ್ಛಿಸಿದ್ದರು ಎಂದರೆ ನಿಜ.

14. ಆದ ಕಾರಣ ನಾನು 1 ನೇ ಆರೋಪಿಯನ್ನು ಹಿರೇಕೆರೂರು ಉಪನೋಂದಣಾಧಿಕಾರಿಗಳ ಕಚೇರಿಗೆ ಕರೆದುಕೊಂಡು ಹೋಗಿ ಮದುವೆ ಮಾಡಿಕೊಂಡೆನು ಎಂದರೆ ಸಾಕ್ಷಿಯು 1 ನೇ ಆರೋಪಿಯೇ ನನ್ನನ್ನು ಹಿರೇಕೆರೂರು ಉಪನೋಂದಣಾಧಿಕಾರಿಗಳ ಕಚೇರಿಗೆ ಕರೆದುಕೊಂಡು ಹೋಗಿ ಮದುವೆ ಮಾಡಿಕೊಂಡರು ಎಂದು ನುಡಿದಿರುತ್ತಾರೆ. 1 ನೇ ಆರೋಪಿಯ ಜೊತೆ ಹಿರೇಕೆರೂರು ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿ ಮಾಡಿಕೊಳ್ಳಲು ನನಗೆ ತಕರಾರು ಇರಲಿಲ್ಲ ಎಂದರೆ ನಿಜ.

15. ನಾನು ಮತ್ತು 1 ನೇ ಆರೋಪಿಯು ಮದುವೆಯಾದ ವಿಚಾರ ನನ್ನ ತಂದೆ, ತಾಯಿ ಮತ್ತು ಮನೆಯವರಿಗೆ ಗೊತ್ತಾಗಿ ಅವರು ನನಗೆ 1 ನೇ ಆರೋಪಿ ಜೊತೆ ಸಂಸಾರ ಮಾಡಬೇಡಾ ಎಂದು ಒತ್ತಯ ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ಮತ್ತು 1 ನೇ ಆರೋಪಿಯ ನೋಂದಣಿ ಮದುವೆಯಾದ ನಂತರ ನಾನು ಎಂದೂ ಸಹ 1 ನೇ ಆರೋಪಿಯ ಮನೆಗೆ ಹೋಗಿ ಸಾಂಸಾರಿಕ ಜೀವನ ನಡೆಸಿಲ್ಲ ಎಂದರೆ ನಿಜ. ನಾನು ಮತ್ತು

1 ನೇ ಆರೋಪಿ ಮದುವೆಯಾದ ನಂತರ ಇಲ್ಲಿಯತನಕ ಯಾವುದೇ ಸಾಂಸಾರಿಕ ಜೀವನ ನಡೆಸಿಲ್ಲ ಎಂದರೆ ಸಾಕ್ಷಿಯು ದಾವಣಗೆರೆಯಲ್ಲಿ ನಾವಿಬ್ಬರು ಸಾಂಸಾರಿಕ ಜೀವನ ನಡೆಸಿದ್ದೇವೆ ಎಂದು ನುಡಿದಿರುತ್ತಾರೆ. ನಾನು ಮತ್ತು 1 ನೇ ಆರೋಪಿ ದಾವಣಗೆರೆಯಲ್ಲಿ ಮನೆ ಮಾಡಿಕೊಂಡು ಸಾಂಸಾರಿಕ ಜೀವನ ನಡೆಸಿಲ್ಲ.

16. 1 ನೇ ಆರೋಪಿಗೆ ಯಾವುದೇ ಆಸ್ತಿ ಇಲ್ಲ ಎಂದರೆ ಸರಿಯಲ್ಲ. ನಾನು ಮತ್ತು 1 ನೇ ಆರೋಪಿ ಇಬ್ಬರೂ ಸೇರಿಕೊಂಡು ಸಾಲ ಮಾಡಿ 1 ನೇ ಆರೋಪಿಯ ಉಪ ಜೀವನಕ್ಕಾಗಿ ಒಂದು ಕಾರನ್ನು ಖರೀದಿಸಿದ್ದೆವು ಎಂದರೆ ಸರಿಯಲ್ಲ. 1 ನೇ ಆರೋಪಿ ಈಗಲೂ ಸಹ ಸದರಿ ಕಾರನ್ನೇ ಚಾಲನೆಮಾಡಿಕೊಂಡು ಉಪಜೀವನ ನಡೆಸುತ್ತಿದ್ದಾರೆ ಎಂದರೆ ಅದು ನನಗೆ ಗೊತ್ತಿಲ್ಲ. ಆದರೆ ನಾನು ಆತನ ಜೊತೆ ಇದ್ದಾಗ ಆತನ ಹತ್ತಿರ ನಾವು ಖರೀದಿಸಿದ ಕಾರು ಇತ್ತು. ಸದರಿ ಕಾರಿನ ಸಾಲ ಈಗಲೂ ಸಹ ಬಾಕಿ ಇದೆ ಎಂದರೆ ನನಗೆ ಗೊತ್ತಿಲ್ಲ.

17. ನಾನು ಮತ್ತು 1 ನೇ ಆರೋಪಿಯು ಪ್ರೀತಿಸುವಾಗ ಮತ್ತು ನಾವಿಬ್ಬರೂ ನೋಂದಣಿ ಮದುವೆ ಮಾಡಿಕೊಂಡ ನಂತರ 1 ನೇ ಆರೋಪಿ ನಮ್ಮ ತಾಯಿಯ ಖಾತೆಗೆ ಸಾಕಷ್ಟು ಸಲ ಹಣವನ್ನು ವರ್ಗಾವಣೆ ಮಾಡಿರುತ್ತಾರೆ ಎಂದರೆ ನಿಜ. 1 ನೇ ಆರೋಪಿಯು ನನಗೆ ಬೇಡವಾದ ಕಾರಣ ಹಿರಿಯರ ಜೊತೆ ಮಾತನಾಡಿ ವಿವಾಹ ವಿಚ್ಛೇದನ ಪಡೆಯಲು ನಿಶ್ಚಯಿಸಿದ್ದೆ ಎಂದರೆ ಸರಿಯಲ್ಲ. ಆಗ ನಾನು ಮತ್ತು 1 ನೇ ಆರೋಪಿಯು ಹಾಗೂ ಹಿರಿಯರು ಸೇರಿಕೊಂಡು ದಾವಣಗೆರೆ ವಕೀಲರ ಹತ್ತಿರ ವಿವಾಹ ವಿಚ್ಛೇದನ ಅರ್ಜಿ ಸಲ್ಲಿಸಲು ಹೋಗಿದ್ದೆವು ಎಂದರೆ ನಿಜ. ಆಗ 1 ನೇ ಆರೋಪಿಯೂ ಸಹ ಸದರಿ ವಿವಾಹ ವಿಚ್ಛೇದನ್ನು ಒಪ್ಪಿಕೊಂಡಿದ್ದರು ಎಂದರೆ ನಿಜ. ಆಗ ವಕೀಲರು ನೀವಿಬ್ಬರೂ ಮದುವೆಯಾಗಿ ಇನ್ನೂ ಒಂದು ವರ್ಷವಾಗಿಲ್ಲ, ಆದ ಕಾರಣ ವಿವಾಹ ವಿಚ್ಛೇದನವನ್ನು ಕಾನೂನಿನ ಪ್ರಕಾರ ಪಡೆಯಲು ಆಗುವುದಿಲ್ಲ ಎಂದು ನಮಗೆ ತಿಳಿಸಿ ವಾಪಸ್ ಕಳಿಸಿಕೊಟ್ಟರು ಎಂದರೆ ನಿಜ. ಒಂದು ವರ್ಷದ ಬಳಿಕ ನಾನು 1 ನೇ ಆರೋಪಿಯಿಂದ ವಿವಾಹ ವಿಚ್ಛೇದನ ಪಡೆಯಲು ರಾಣೇಬೆನ್ನೂರು ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದೆ ಎಂದರೆ ನಿಜ.

18. ಈ ಪ್ರಕರಣದ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆ. ಆ ರಿತೀ ಪೊಲೀಸರು ನನ್ನನ್ನು ದೂರು ಕೊಡುವಾಗ ಮತ್ತು ದೂರು ಕೊಟ್ಟ ನಂತರ ಮನೆಗೆ ಬಂದಿದ್ದಾಗ ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನು

ಪಡೆದುಕೊಂಡಿರುತ್ತಾರೆ. 1 ನೇ ಆರೋಪಿ ನನ್ನ ಮೊಬೈಲ್ ಗೆ ಕಳಿಸುತ್ತಿದ್ದ ಮೆಸೇಜ್ ಗಳನ್ನು ತೆಗೆದು ನಾನು ಪೊಲೀಸರಿಗೆ ಕೊಟ್ಟಿರುವುದಿಲ್ಲ. ನಾನು ಪೊಲೀಸರ ಮುಂದೆ ಹೇಳಿಕೆ ಕೊಡುವಾಗ ನನ್ನ ಮತ್ತು 1 ನೇ ಆರೋಪಿಯ ಮೊಬೈಲ್ ನಂಬರ್ ಗಳನ್ನು ಪೊಲೀಸರಿಗೆ ಕೊಟ್ಟಿಲ್ಲ. ಪೊಲೀಸರು ನನ್ನ ಹೇಳಿಕೆಗಳಲ್ಲಿ ಏನೇನು ಬರೆದುಕೊಂಡರು ಎಂದು ನನಗೆ ಈಗ ನ್ಯಾಯಾಲಯದ ಮುಂದೆ ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ.

19. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ "1 ನೇ ಆರೋಪಿಯು ನನ್ನ ಜೊತೆ ನೋಂದಣಿ ಮದುವೆಯಾಗಿದ್ದರೂ ಸಹ ಬೇರೆ ಹೆಣ್ಣು ಮಕ್ಕಳ ಜೊತೆ ಸಂಬಂಧ ಇಟ್ಟುಕೊಂಡಿದ್ದನು ಮತ್ತು 1 ನೇ ಆರೋಪಿಯು ನನಗೆ, ನನ್ನ ತಂದೆ, ತಾಯಿ ಮತ್ತು ತಂಗಿಗೆ ಕೆಟ್ಟ-ಕೆಟ್ಟ ಮಾತುಗಳಿಂದ ಬೈಯುತ್ತಿದ್ದನು"ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟಿರುವ ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ಆ ರೀತಿ ನಾನು ಪೊಲೀಸರ ಮುಂದೆ ಹೇಳದೇ, ಮೊದಲನೇ ಬಾರಿಗೆ ನ್ಯಾಯಾಲಯದ ಮುಂದೆ ಹೇಳಿರುತ್ತೇನೆ ಎಂದರೆ ಸರಿಯಲ್ಲ.

20. ಅದೇ ರೀತಿ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ "ಆಗ ನನ್ನ ತಂದೆ, ತಾಯಿಯು ನೀನು 1 ನೇ ಆರೋಪಿ ಜೊತೆ ಮದುವೆಯಾಗಿದ್ದೀಯಾ ಆದ ಕಾರಣ ನೀನು ಅವರ ಮನೆಗೆ ಹೋಗಿ ಬಾಳ್ವೆ ಮಾಡಬೇಕೆಂದು ಹೇಳಿದರು, ನನ್ನ ಮತ್ತು 1 ನೇ ಆರೋಪಿಯ ನೋಂದಣಿ ಮದುವೆ ವಿಚಾರ ಉಳಿದ 2 ರಿಂದ 7 ನೇ ಆರೋಪಿತರೆಲ್ಲರಿಗೂ ಗೊತ್ತಿತ್ತು, ಆಗ ನಮ್ಮ ಮನೆಯವರು ಮತ್ತು 1 ನೇ ಆರೋಪಿಯ ಮನೆಯವರು ಕುಳಿತುಕೊಂಡು ಮಾತನಾಡಿದರು, ನಂತರ ನನ್ನ ಮತ್ತು 1 ನೇ ಆರೋಪಿಯ ನೋಂದಣಿ ಮದುವೆ ವಿಚಾರವನ್ನು ಪೊಲೀಸರಿಗೆ ತಿಳಿಸಿದೆವು" ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟಿರುವ ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ಆ ರೀತಿ ನಾನು ಪೊಲೀಸರ ಮುಂದೆ ಹೇಳದೇ, ಮೊದಲನೇ ಬಾರಿಗೆ ನ್ಯಾಯಾಲಯದ ಮುಂದೆ ಹೇಳಿರುತ್ತೇನೆ ಎಂದರೆ ಸರಿಯಲ್ಲ.

21. ಅದೇ ರೀತಿ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ "1 ನೇ ಆರೋಪಿಯು ನನ್ನ ಮುಂದೆ ತನ್ನ ತಂದೆ, ತಾಯಿಗೆ ಶಿವಮೊಗ್ಗದಲ್ಲಿ ಹೊಲ ಇದೆ, ಮನೆ ಇದೆ, ನನ್ನ ತಾಯಿಯ 10 ತೊಲ ಬಂಗಾರ ಇದೆ ಎಂದು ಹೇಳಿದ್ದನು, ಆಗ ನನ್ನ ತಂದೆ, ತಾಯಿ ನನಗೆ ಮತ್ತು 1 ನೇ ಆರೋಪಿಗೆ ಸಂಸಾರದಲ್ಲಿ ಹೊಂದುಕೊಂಡು ಹೋಗಿ ಬಾಳ್ವೆ ಮಾಡಿ ಎಂದು ಬುದ್ದಿವಾದ ಹೇಳಿದರು, ಆಗ ನಾನು 1 ನೇ ಆರೋಪಿಗೆ ಫೋನ್ ಮಾಡಿ ಬಾ

ಹೊಂದಿಕೊಂಡು ಬಾಳ್ವೆ ಮಾಡೋಣ ಎಂದು ಕೇಳಿದೆನು, ಆಗ 1 ನೇ ಆರೋಪಿಯು ಇಲ್ಲ ನನ್ನ ಚಿಕ್ಕಪ್ಪಂದಿರಾದ ಚಿಕ್ಕಣ್ಣ, ಓಂ ಪ್ರಕಾಶ ಮತ್ತು ಚಿಕ್ಕಮ್ಮಂದಿರಾದ ಲಕ್ಷ್ಮಿ, ಶಿಲ್ಪಾ ಮತ್ತು ನವನೀತ ಬೇಡ ಎಂದು ಹೇಳಿದ್ದಾರೆಂದು ತಿಳಿಸಿದರು" ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟಿರುವ ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ಆ ರೀತಿ ನಾನು ಪೊಲೀಸರ ಮುಂದೆ ಹೇಳದೇ, ಮೊದಲನೇ ಬಾರಿಗೆ ನ್ಯಾಯಾಲಯದ ಮುಂದೆ ಹೇಳಿರುತ್ತೇನೆ ಎಂದರೆ ಸರಿಯಲ್ಲ.

22. ನಾನು ಹೇಳುವ ಪ್ರಕಾರ ಯಾವುದೇ ಮೊದಲನೇ ಅಥವಾ 2 ನೇ ಘಟನೆ ನಡೆಯದೇ ಇದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಗಳು ನನಗಾಗಲೀ ನನ್ನ ಮನೆಯವರಿಗಾಗಲೀ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಮತ್ತು ಹಲ್ಲೆ ಮಾಡಿಲ್ಲ ಹಾಗೂ ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನನ್ನ ಮೂಗಿಗೆ ಪೆಟ್ಟಾದಾಗ ರಕ್ತ ಬಂದಿತ್ತು, ಆದರೆ ಸದರಿ ರಕ್ತವು ನನ್ನ ಬಟ್ಟೆಗೆ ಬೀಳಲಿಲ್ಲ. ಆರೋಪಿಗಳು ನನಗೆ ಇಟ್ಟಿಗೆಯಿಂದ ಹಲ್ಲೆ ಮಾಡಿದರು ಎನ್ನಲಾದ ಇಟ್ಟಿಗೆಯನ್ನು ಪೊಲೀಸರಿಗೆ ಕೊಟ್ಟಿರುವುದಿಲ್ಲ ಆದರೆ ತೋರಿಸಿರುತ್ತೇನೆ. ಆದರೆ ಪೊಲೀಸರು ಸದರಿ ಇಟ್ಟಿಗೆಯನ್ನು ತೆಗೆದುಕೊಂಡು ಹೋಗಲಿಲ್ಲ.

23. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ "ನಾನು ಸದರಿ ವಿಚಾರವನ್ನು ಪಿಎಸ್ಐ ರವರಿಗೆ ಮತ್ತು ನನ್ನ ತಂದೆ, ತಾಯಿಗೆ ಫೋನ್ ಮಾಡಿ ತಿಳಿಸಿದೆನು, ಆಗ ಪಿಎಸ್ಐ ರವರು ಇಬ್ಬರು ಪೊಲೀಸ್ ಪೇದೆಗಳನ್ನು ನಮ್ಮ ಮನೆ ಹತ್ತಿರ ಕಳಿಸಿಕೊಟ್ಟಿದ್ದರು" ಎಂಬ ವಿಚಾರವನ್ನು ಪೊಲೀಸರ ಮುಂದೆ ಕೊಟ್ಟಿರುವ ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ಆ ರೀತಿ ನಾನು ಪೊಲೀಸರ ಮುಂದೆ ಹೇಳದೇ, ಮೊದಲನೇ ಬಾರಿಗೆ ನ್ಯಾಯಾಲಯದ ಮುಂದೆ ಹೇಳಿರುತ್ತೇನೆ ಎಂದರೆ ಸರಿಯಲ್ಲ.

24. ನಾನು ದಾವಣಗೆರೆಯ ಚಿಗಟೇರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುವ ವಿಚಾರವನ್ನು ಪಿಎಸ್ಐ ರವರಿಗೆ ತಿಳಿಸಿರುತ್ತೇನೆ. ಆದರೆ ಸದರಿ ವಿಚಾರವನ್ನು ತನಿಖಾಧಿಕಾರಿಯಾದ ಡಿವೈಎಸ್ಪಿ ರವರಿಗೆ ತಿಳಿಸಿರುವುದಿಲ್ಲ. ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ನಿಪಿ–5 ರಿಂದ 7 ರ ಮೆಡಿಕಲ್ ದಾಖಲಾತಿಗಳನ್ನು ತನಿಖಾಧಿಕಾರಿಗಳಾದ ಡಿವೈಎಸ್ಪಿ ರವರಿಗೆ ಕೊಡಲು ಪ್ರಯತ್ನ ಪಟ್ಟಿಲ್ಲ. ನಾನು ನಿಪಿ–5 ರಿಂದ 7 ರ ದಾಖಲಾತಿಗಳನ್ನು ಕೇಸಿಗಾಗಿ ಸೃಷ್ಟಿಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ನನಗೆ ಎಂದೂ ಸಹ

ಇಟ್ಟಿಗೆಯಿಂದ ಹಲ್ಲೆ ಮಾಡಿಲ್ಲ ಮತ್ತು ನನಗೆ ಯಾವುದೇ ಗಾಯಗಳು ಆಗಿಲ್ಲ ಎಂದರೆ ಸರಿಯಲ್ಲ.

25. ನನ್ನ ಮತ್ತು 1 ನೇ ಆರೋಪಿಯ ವಿವಾಹ ವಿಚ್ಛೇದನಕ್ಕಾಗಿ ಮಾತುಕತೆಗಳು ಮತ್ತು ರಾಜೀ ಪಂಚಾಯತಿಗಳು ಹಿರಿಯರ ಹತ್ತಿರ ಮತ್ತು ಕುಮಾರಪಟ್ಟಣಂ ಪೊಲೀಸ್ ಠಾಣೆಯಲ್ಲಿ ಹಲವಾರು ಸಲ ನಡೆದಿರುತ್ತವೆ ಎಂದರೆ ನಿಜ. 1 ನೇ ಆರೋಪಿಯು ನನ್ನ ತಾಯಿಯ ಖಾತೆಗೆ ಹಾಕಿರುವ ಹಣವನ್ನು ವಾಪಸ್ ಕೇಳಿದಾಗ ಯಾವುದೇ ಘಟನೆ ನಡೆಯದೇ ಇದ್ದರೂ ಸಹ ನಾನು ಮತ್ತು ನನ್ನ ತಂಗಿ ಹಾಗೂ ನಮ್ಮ ಮನೆಯವರು ಸೇರಿಕೊಂಡು ಆರೋಪಿಗಳ ವಿರುದ್ಧ ಸುಳ್ಳು ದೂರನ್ನು ಕೊಟ್ಟು, ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 1 ನೇ ಆರೋಪಿಯು ನಮ್ಮ ತಾಯಿಯ ಖಾತೆಗೆ ಹಾಕಿರುವ ಹಣವನ್ನು ಈಗಾಗಲೇ 1 ನೇ ಆರೋಪಿಗೆ ವಾಪಸ್ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಆ ರೀತಿ ನಾವು ಹಣವನ್ನು ವಾಪಸ್ ನೀಡದೇ ಇದ್ದರೂ ಸಹ, ನೀಡಿದ್ದೇನೆ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು 1 ನೇ ಆರೋಪಿಯ ನಡುವೆ ಇರುವ ವೈವಾಹಿಕ ಜೀವನದ ಸಮಸ್ಯೆಗೆ 2 ರಿಂದ 7 ನೇ ಆರೋಪಿಗಳಿಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.